## Assessment –March 2024 Model Paper

ವಿಷಯ: ಪ್ರಥಮ ಭಾಷೆ ಕನ್ನಡ                ಅಂಕಗಳು: 50

ತರಗತಿ: 8                ಸಮಯ: 2 ಗಂಟೆ 30 ನಿಮಿಷ

---

**I.** **1 ರಿಂದ 9 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **9 x 1= 9**

**1. 'ಕೆರೆಕೊಪ್ಪದಲ್ಲಿ ನಮಗೆಲ್ಲಾ ಚರಟದ ಕಾಫಿ'**

**ಈ ವಾಕ್ಯದಲ್ಲಿ 'ಕೆರೆಕೊಪ್ಪ' ಪದವು :**

ಅ) ರೂಢನಾಮ    ಬ) ಅಂಕಿತನಾಮ

ಕ) ಅನ್ವರ್ಥನಾಮ    ಡ) ಗುಣವಾಚಕ

ಉತ್ತರ : ----------------------

**2. ವಿದೇಶಗಳಲ್ಲಿ ಮನೆಯ ನಲ್ಲಿಯಲ್ಲಿ ಬರುವ ನೀರನ್ನು ಯಾರು ಕುಡಿಯುವುದಿಲ್ಲ. ಅದನ್ನು ಕುಡಿದರೇನು ಪ್ರಾಣ ಹೋಗುವುದಿಲ್ಲ.**

**ಈ ವಾಕ್ಯದಲ್ಲಿರುವ ತತ್ಸಮ ಪದ :**

ಅ) ವಿದೇಶ    ಬ) ನಲ್ಲಿ

ಕ) ಪ್ರಾಣ    ಡ) ಮನೆ

ಉತ್ತರ : ----------------------

**3. ಡಿ.ವಿ.ಜಿ. ಬರೆದ ಕವಿತೆಗಳು ಅವರ ವ್ಯಕ್ತಿತ್ವವನ್ನು ಬಹಳ ಸೊಗಸಾಗಿ ವರ್ಣಿಸುತ್ತವೆ. ಇಲ್ಲಿ 'ವ್ಯಕ್ತಿತ್ವವನ್ನು' ಪದದಲ್ಲಿರುವ ವಿಭಕ್ತಿ :**

ಅ) ಪ್ರಥಮ    ಬ) ದ್ವಿತೀಯ

ಕ) ಸಪ್ತಮಿ    ಡ) ಚತುರ್ಥಿ

ಉತ್ತರ : ----------------------

**4. ಶಿವನ ಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು. ಇಲ್ಲಿ 'ವ' ಕಾರಗಮ ಸಂಧಿಗೆ ಉದಾಹರಣೆ :**

ಅ) ಶಿವನ ಸಮುದ್ರವನ್ನು    ಬ) ಒಳಸೇರುವ

ಕ) ವಿಶ್ವಾಸದಿಂದ    ಡ) ಸ್ವಾಗತಿಸಿದರು

**5. ಇವುಗಳಲ್ಲಿ 'ಜೋಡು–ನುಡಿ' ವ್ಯಾಕರಣಾಂಶವನ್ನು ಹೊಂದಿರುವ ವಾಕ್ಯ :**

ಅ) ಇಂದು ದಿನವೆಲ್ಲಾ ಅಲೆದು ಅಲೆದು ದಣಿದು ನಿದ್ರೆ ಹೋಗಿದ್ದಾರೆ

ಬ) ಅಪ್ಪು–ದಪ್ಪುದು 'ತಪ್ಪೆ'

ಕ) ಹಬ್ಬದ ಭಕ್ಷ ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು.

ಡ) ಗಡಗಡ ನಡುಗಲು ಶುರು ಮಾಡುತ್ತಿದ್ದವು.

ಉತ್ತರ : ---------------------

**6. ಕಬ್ಬಿಗರ್ಗೆ ಸಿದ್ಧಿನೆದ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ ಇಲ್ಲಿ ಸಪ್ತಾಕ್ಷರೀ ಎಂಬುದು :**

ಅ) ಕ್ರಿಯಾ ಸಮಾಸ ಬ) ದ್ವಿಗು ಸಮಾಸ

ಕ) ಕರ್ಮಧಾರೆಯ ಡ) ತತ್ಪುರುಷ ಸಮಾಸ

ಉತ್ತರ : ---------------------

**7. " ಅಮ್ಮಾಜಿ, ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ".**

**ಈ ವಾಕ್ಯದಲ್ಲಿ ಬಳಸಿದ ಲೇಖನ ಚಿಹ್ನೆಗಳು :**

ಅ) ಅಲ್ಪ ವಿರಾಮ, ಉದ್ಧರಣ ಬ) ಭಾವಸೂಚಕ, ಅರ್ಧ ವಿರಾಮ

ಕ) ಪ್ರಶ್ನಾರ್ಥಕ ಭಾವಸೂಚಕ ಡ) ಉದ್ಧರಣ, ಪೂರ್ಣ ವಿರಾಮ

ಉತ್ತರ : ---------------------

**8. ಪಕ್ಷಪಾತವನೀಸು ಪರಿಯಲಿ ಮಾಡುವರೆ ಶಿವಯೆಂದನಾವ್ರಿಹಿಗ**

**ಈ ವಾಕ್ಯದಲ್ಲಿ 'ವ್ರೀಹಿ' ಪದದ ಅರ್ಥ :**

ಅ) ಭತ್ತ ಬ) ರಾಗಿ

ಕ) ನವಣೆ ಡ) ಗೋಧಿ

ಉತ್ತರ : ---------------------

**9. ನಮ್ಮ ದೇಗುಲಗಳೇ ನಮ್ಮ ರಾಷ್ಟ್ರದ ಚರಿತ್ರೆಯ ಹೆಗ್ಗುರುತು.**

ಅ) ಸಂಯೋಜಿತ ವಾಕ್ಯ ಬ) ನಿಷೇಧಾರ್ಥಕ ವಾಕ್ಯ

ಕ) ಸಾಮಾನ್ಯ ವಾಕ್ಯ ಡ) ಮಿಶ್ರ ವಾಕ್ಯ

ಉತ್ತರ : ---------------------

**10.** **ಒಂದು ದಿನ ದೊರೆಮಗ ಎಲ್ಲೋ ಹೊರಗೆ ಹೋಗಿದ್ದ, ಆಗ ದೊರೆ ಮಗಳು ತನ್ನ ಸ್ನೇಹಿತೆಯರಿಗೆಲ್ಲ, "ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣ ; ನಮ್ಮ ಅತ್ತಿಗೆ ಹೂವಿನಗಿಡ ಆಗ್ತಾಳೆ ನೀವೆಲ್ಲರೂ ಬನ್ನಿ.**

**ದೊರೆ ಮಗಳು ತನ್ನ ಸ್ನೇಹಿತರೊಂದಿಗೆ ಸುರಹೊನ್ನೆ ತೋಟಕ್ಕೆ ಹೋಗಲು ಕಾರಣ:**

ಅ) ದೊರೆ ಮಗನ ತೋಟ ನೋಡಲು ಬ) ಹೂವಿನ ಗಿಡವಾಗುವ ಅತ್ತಿಗೆಯನ್ನು ನೋಡಲು

ಕ) ಸ್ನೇಹಿತೆಯರೆಲ್ಲ ಆಟ ಆಡಲು ಡ) ಸುರಹೊನ್ನೆ ತೋಟ ನೋಡಲು

ಉತ್ತರ : ---------------------

**11.** **ನಾಡಿನೆಲ್ಲ ಗಡಿಗಳಲ್ಲಿ ಬಾನಿನಲ್ಲಿ ಕಡಲಿನಲ್ಲಿ**
**ನಮ್ಮ ಯೋಧರೆತ್ತಿ ಹಿಡಿದ ನಮ್ಮ ಧ್ವಜದ ನೆರಳಿನಲ್ಲಿ**

**ಈ ಪದ್ಯದಲ್ಲಿ ಹೇಳಿದಂತೆ ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ಯಾರು?**

ಅ) ಯೋಧರು ಬ) ಭಾರತೀಯರು

ಕ) ಹುತಾತ್ಮರು ಡ) ಧೀರರು

ಉತ್ತರ : ---------------------

**12.** **ವರದಕ್ಷಿಣೆ ಎಂಬ ಪಿಶಾಚಿಯು ಅದೆಷ್ಟು ಸುಕುಮಾರಿಯನ್ನು ಬಲಿ ತೆಗೆದುಕೊಳ್ಳುವುದೋ ದೇವರೇ ಬಲ್ಲ! ಆದರೆ ತನ್ನ ಶಾಂತಿಯನ್ನು ಅದು ಬಲಿತೆಗೆದುಕೊಂಡ ಮೇಲೆ ನನಗದರ ನಿಜಸ್ವರೂಪ ಗೊತ್ತಾಯಿತು.**

**ಇಲ್ಲಿ ವರದಕ್ಷಿಣೆ ಎಂಬ ಪಿಶಾಚಿ ಬಲಿತೆಗೆದುಕೊಂಡದ್ದು :**

ಅ) ಶಾಂತಿಯನ್ನು ಬ) ಪಿಶಾಚಿಯನ್ನು

ಕ) ಸುಕುಮಾರಿಯನ್ನು ಡ) ತಂದೆ-ತಾಯಿಯರನ್ನು

ಉತ್ತರ : ---------------------

**13.** **ಸಕಲ ಗುಣ ಪೂರ್ಣನೀತ । ಸಕಲ ದೋಷ ದೂರನೀತ**
**ಸಕಲಾನಂದ ಪೂರ್ಣನೀತ । ಭಕುತಿ ಮಂತ್ರಕೋಟಿವದಾತ**
**ಈ ಪದ್ಯದಲ್ಲಿ ಗೋಪಾಲದಾಸರು ಹೇಳಿದಂತೆ ದೇವರು ಒಲಿಯುವ ಮಂತ್ರ :**

ಅ) ಸಕಲಗುಣ ಬ) ಸಕಲಾನಂತ

ಕ) ಸಕಲದೋಷ ಡ) ಭಕ್ತಿಮಂತ್ರ

**14.** **ಕೋಟಗೋಡಗ ನಮ್ಮ ಹಣಗಳೇ ಮಟ್ಟಲು,**

**ನಮ್ಮ ಸಾವೇ ನೋವೆ ಹೊಸ ನಾಡ ತೊಟ್ಟಿಲು,**

**ಆದಾವು; ಅಂಜುವೆದೆ ನಮ್ಮದಲ್ಲ:**

**ಸೋಲುಬಗೆ ವೀರನಿಗೆ ಸಲ್ಲ, ಹೊಲ್ಲ!**

**ಈ ಪದ್ಯದಲ್ಲಿ ಹೇಳಿರುವಂತೆ ಕೋಟೆ ಗೋಡೆಗಳಿಗೆ ಮೆಟ್ಟಿಲುಗಳಾಗಿರುವುದು :**

ಅ) ಕೋಟೆಗೋಡೆಗಳು ಬ) ನಮ್ಮ ಹೆಣಗಳು

ಕ) ತೊಟ್ಟಿಲುಗಳು ಡ) ಸಾವು ನೋವುಗಳು

ಉತ್ತರ : ---------------------

**15.** **ಜ್ಞಾನಾರ್ಜನೆಗಾಗಿ, ವಿವೇಕ ಸಾಧನೆಗಾಗಿ, ಚೀನಾದೇಶದಿಂದ ಪ್ರಯಾಣಿಕನೊಬ್ಬ ಬಂದ. ಭರತ ಖಂಡಕ್ಕೆ ಹ್ಯೂಯಾನ್‌ತ್ಸಾಂಗ್ ಎಂಬುದವನ ಹೆಸರು. ಉತ್ತರ ಮೇರುಗಿರಿಗಳೇನು, ಮರುಭೂಮಿಗಳೇನು; ಅವುಗಳನ್ನೆಲ್ಲಾ ದಾಟಿ ಬಂದ**

**ಇಲ್ಲಿ ಹ್ಯೂಯಾನ್‌ತ್ಸಾಂಗ್ ಭಾರತಕ್ಕೆ ಬಂದಿರುವುದು ಈ ಕಾರಣಕ್ಕೆ :**

ಅ) ಪ್ರಯಾಣಿಕನಾಗಿ ಬ) ಮೇರುಗಿರಿ ನೋಡಲು

ಕ) ಜ್ಞಾನಾರ್ಜನೆಗಾಗಿ ಡ) ಮರುಭೂಮಿಗಳನ್ನು ನೋಡಲು

ಉತ್ತರ : ---------------------

**16.** **ನನ್ನ ದೇಹದ ಬೂದಿ–ಗಾಳಿಯಲಿ ತೂರಿಬಿಡಿ,**

**ಹೋಗಿ ಬೀಳಲಿ ಭತ್ತ ಬೆಳೆಯುವಲ್ಲಿ:**

**ಬೂದಿ–ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ,**

**ಧನ್ಯವಾಯಿತು ಹುಟ್ಟು ಸಾವಿನಲ್ಲಿ**

**ಈ ಸಾಲಿನ ಪ್ರಕಾರ ಬೂದಿ ಹೊಳೆಯಲ್ಲಿ ಹರಿಯ ಬಿಟ್ಟಾಗ ಸೇರುವುದು :**

ಅ) ಮೀನಿನ ಬಾಯಿಗೆ ಬ) ಹೊಳೆಗೆ

ಕ) ಮುಷ್ಠಿಗೆ ಡ) ಮಣ್ಣಿಗೆ

ಉತ್ತರ : ---------------------

**17.** 'ಸಂಸ್ಕೃತಿಯ ಮೇಲೆದಾಳಿ' ಎನ್ನುವಾಗ ನನಗೆ 'ಮದರ್ಸ್‌ಡೇ', 'ಫಾದರ್ಸ್‌ಡೇ', 'ವ್ಯಾಲೆಂಟೈನ್‌ಡೇ' ಆಚರಿಸುವುದು ಅಷ್ಟು ದೊಡ್ಡ ಅನಾಹುತವಾಗಿ ಕಾಣುವುದಿಲ್ಲ. ಈ ಹೊಸ ಹೊಸ ದಿನಗಳೆಲ್ಲ ಉಕ್ಕಿದ ಪ್ರೀತಿಯ ದ್ಯೋತಕವಲ್ಲ. 'ಗಿಫ್ಟ್', 'ಗ್ರೀಟಿಂಗ್ ಕಾರ್ಡ್' ಮಾರುವ ಹೊಸ ಹುನ್ನಾರಗಳೆಂದು ಸರ್ವರಿಗೂ ವೇದ್ಯವಾಗಿದೆ.

ಈ ಗದ್ಯಭಾಗದಲ್ಲಿ ಹೇಳಿರುವಂತೆ ಭಾರತದಲ್ಲಿ ಇತ್ತೀಚೆಗೆ ನಡೆದಿರುವ ಹುನ್ನಾರ ಯಾವುದು?

---------------------------------------------------------------------------------------------------

---------------------------------------------------------------------------------------------------

**18.** ನಮ್ಮ ಅರಮನೆಯಲ್ಲಿ.
ನಿಮ್ಮ ಐಶ್ವರ್ಯದಲ್ಲಿ ಕಣಮಾತ್ರವನು ನನಗೆ
ಇಲ್ಲವೆನ್ನದೆ ನನ್ನ ಪರಿಪಾಲಿಸಿದಿರಿ.
ಪತಿಯನಿತ್ತಿರಿ; ಬಾಲ ದೇವರಾಗಿರಲೆಂದು;
ಪತಿಯನಿನ್ನೊಮ್ಮೆ ನೀಡಿರಿ; ನನ್ನ ರಕ್ಷಿಸಿರಿ.

ಇಲ್ಲಿ ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ಕೇಳುತ್ತಾಳೆ?

———————————————————————————————————

**19.** ನಮಗೆ ತುಂಬಾ ಭಯವಾದಾಗ ಹೇಳಿಕೊಳ್ಳಲು ಅರ್ಜುನ ಮಂತ್ರವಿತ್ತು. "ಅರ್ಜುನಃಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತವಾಹನಃ" ಇದು ನಮ್ಮಜ್ಜ ಹೇಳಿಕೊಟ್ಟಿದ್ದು. ಅದನ್ನು ಹೇಳಿಬಿಟ್ಟರೆ ಭಯ ನಿವಾರಣೆ ಆಗುತ್ತೆ ಅಂತ ಹೇಳಿದ್ದರು.

ಲೇಖಕರು ಭಯನಿವಾರಣೆಗಾಗಿ ಹೇಳಿಕೊಳ್ಳುತ್ತಿದ್ದ ಮಂತ್ರ ಯಾವುದು?

———————————————————————————————————

**20.** ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!

ಈ ಪದ್ಯದ ಪ್ರಕಾರ ಕನ್ನಡಿಗರ ಪಾಡು ಏನು?

———————————————————————————————————

———————————————————————————————————

**21.** 'ರಾಯ', 'ಅಣ್ಣ' ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡ ಏಳ್ಗೆಯ ಹಂಬಲವೇ ಹಂಬಲ. ಸ್ವತಃ ಕವಿ 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ.

ಇಲ್ಲಿ ಚಾವುಂಡರಾಯನು ಕನ್ನಡಕ್ಕೆ ಕೊಟ್ಟ ಕಾಣ್ಕೆ ಏನು?

________________________________________

________________________________________

________________________________________

**22.** ಹಿತವಂ ತೋರುವನಾತ್ಮಬಂಧು ಪೊರೆವಾತಂ ತಂದೆ ಸದ್ಧರ್ಮದಾ/
ಸತಿಯೇ ಸರ್ವಕೆ ಸಾಧನಂ ಕಲಿಸಿದಾತಂ ವರ್ಣಮಾತ್ರಂ ಗುರು//
ಶ್ರುತಿಮಾರ್ಗಂ ಬಿಡದಾತ ಸ್ರುವತಿ ಮಹಾ ಸದ್ವಿದ್ಯೆಯೇ ಪುಣ್ಯದಂ
ಸುತನೇ ಸದ್ಗತಿದಾತನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ//

ಈ ಪದ್ಯಭಾಗದಲ್ಲಿ ಹೇಳಿರುವಂತೆ ತಂದೆ, ಸತಿ, ಗುರು, ಸುತನ ಲಕ್ಷಣಗಳೇನು?

________________________________________

________________________________________

________________________________________

**23.** ಇನ್ನೊಂದು ಸಲ ಒಬ್ಬ ಆಟೋಚಾಲಕ ಕೇಳಿದ: "ಏನು ಸ್ವಾಮಿ, ಈ ವೇಗಕ್ಕೆನೇ ವಿಮಾನದಲ್ಲಿ ಹೋಗುವಾಗ ನಿಮಗೆ ಭಯವಾಗಲಿಲ್ಲವೇ?" ಎಂದು ಪ್ರಶ್ನಿಸಿದ. "ಇಲ್ಲಪ್ಪ, ನನಗೇನೂ ಅಲ್ಲಿ ಭಯವಾಗುವುದಿಲ್ಲ, ಯಾಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರಲಿಲ್ಲ. ಜೊತೆಗೆ ವಿಮಾನವನ್ನು ಓವರ್ ಟೇಕ್ ಮಾಡಿದ ಪ್ರಸಂಗವೂ ಇಲ್ಲ" ಅಂದೆ. "ಕರೆಕ್ಟ್ ಸಾರ್ ನೀವು ಹೇಳಿದ್ದು" ಎಂದು ಒಪ್ಪಿದ.

ಲೇಖಕರು ವಿಮಾನಯಾನದ ಕುರಿತು ಏನೆಂದು ಹೇಳಿದ್ದಾರೆ?

________________________________________

________________________________________

________________________________________

ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು

ಎಂಬ ಸಾಹಸ ಮಾಡೆ ದೋಷವೇನು?

ಕಂಡ ಕಂಡವರೇನು ಬಲ್ಲರಿದನು

ಉಂಡವನು ಕಂಡಿಹನು ಇದರ ಹದನು.

ಈ ಪದ್ಯಭಾಗದ ಪ್ರಕಾರ ಗೆಳೆತನದ ಶುಚಿ ರುಚಿಯು ಹೇಗಿರುತ್ತದೆ? ವಿವರಿಸಿ.

________________________________________________________________

________________________________________________________________

________________________________________________________________

**25.** 

ಈ ಚಿತ್ರವನ್ನಾಧರಿಸಿ ಶಂಕರಪ್ಪ ಅವರು ರಹೀಮನ ಬಳಿ ಸಂಧಾನ ಮಾಡಿದ ಪ್ರಸಂಗ ವಿವರಿಸಿ.

________________________________________________________________

________________________________________________________________

________________________________________________________________

________________________________________________________________

26. "ನಾನು ಹೇಳಬಾರದೆಂದಿದ್ದೆ. ನೀವು ಪಟ್ಟು ಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ ಇದೂ ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿಬರುವುದು ಹೇಗೆ ನನಗೆ ಕರ್ತವ್ಯವೋ ಹಾಗೆ ನಿಮ್ಮ ಮರ್ಯಾದೆಗೆ ಊನ ಬಾರದಂತೆ ನಡೆದುಕೊಳ್ಳುವುದೂ ನನಗೆ ಕರ್ತವ್ಯವೇ ಅಲ್ಲವೇ?"

ಡಿ.ವಿ.ಜಿ. ಯವರ ಶ್ರೀಮತಿ ಅವರು ಬಂಧುಗಳ ಮನೆಯಲ್ಲಿ ನಡೆದ ಉತ್ಸವಕ್ಕೆ ಏಕೆ ಹೋಗಿರಲಿಲ್ಲ?

________________________________________________________________

________________________________________________________________

________________________________________________________________

**27.** ಮುದ್ದಣ : ಏಂ! ಮುನಿಗಳೊಂದು ಜಪದ ತಪದ ಮಂತ್ರದ

ಬಲ್ಮೆಯೇಂ ಕಿರಿದೆ! ಬೇಡಿದ ಪುರುಳನುರಿದಿಂ ತಂದೀಗುಂ.

ಮನೋರಮೆ : ಅಂತುಟೇಂ, ಘನಂ! ಆವುದೊ ಮಂತ್ರಂ.

ಮುದ್ದಣ : ಅವುದೇಂ! ಏಕಾಕ್ಷರಿ, ದ್ವ್ಯಕ್ಷರೀ, ತ್ರ್ಯಕ್ಷರೀ, ಚತುರಾಕ್ಷರೀ ಪಂಚಾಕ್ಷರೀ, ಷಡಕ್ಷರೀ ಮುಂತಪ್ಪ ಪ್ರಸಿದ್ಧ ಮಂತ್ರಂಗಳೊಳವಲ್ತೆ

ಮನೋರಮೆ : ಓ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಿಂ ಪೆರಿತೊಂದರಿಗೊಡವೆನಿಲ್ಲದಿರ್ಕುಂ ತಾಪಸರ್.

ಮುದ್ದಣ : ಅಪ್ಪುದಪ್ಪುದು : ತಪ್ಪೇಂ?

ಸಂದರ್ಭ :– ಅಪ್ಪುದಪ್ಪುದು : ತಪ್ಪೇಂ?

________________________________________

________________________________________

________________________________________

________________________________________

VI.ಈ ಕೆಳಗಿನ ಕವಿಯ ಸ್ಥಳ, ಕಾಲ, ಕೃತಿಗಳು, ಬಿರುದುಗಳ ಕುರಿತು ವಾಕ್ಯರೂಪದಲ್ಲಿ ಪರಿಚಯ ಬರೆಯಿರಿ.

**1x3=3**

**28**. ಗೋಪಾಲದಾಸರು:

ಸುಳಿವುಗಳು: ಮೊಸರುಕಲ್ಲಿನಲ್ಲಿ, ದೇವದುರ್ಗ ತಾಲ್ಲೂಕು, ಕಾಲ ಕ್ರಿ.ಶ. ೧೭೨೧, ತಂದೆ ಮುರಾರಿ, ಗುರುಗಳು ವಿಜಯದಾಸರು, ತಾಯಿ ವೆಂಕಮ್ಮ, ರಾಯಚೂರು ಜಿಲ್ಲೆ, ರೈತ ಕುಟುಂಬ, ಮೊದಲ ಹೆಸರು ಭಾಗಣ್ಣ, ಗೋಪಾಲ ವಿಠಲ ಅಂಕಿತನಾಮ, ೯೬ ಕೀರ್ತನೆಗಳು, ೭೦ ಸುಳಾದಿಗಳು, ೨೧ ಉಗಾಭೋಗಗಳು.

________________________________________

________________________________________

________________________________________

________________________________________

________________________________________

**29.** ಗೀಜಗನ ಗೂಡುಗಳು ತೂಗುವ ತೊಟ್ಟಿಲಿನಂತೆ ತೂಗುತ್ತಿದ್ದವು.

ಉಪಮೇಯ :– ------------------------------------------------------

ಉಪಮಾನ :– ------------------------------------------------------

ಉಪಮಾವಾಚಕ :– ------------------------------------------------------

ಸಮಾನ ಧರ್ಮ :– ------------------------------------------------------

ಅಲಂಕಾರ :– ------------------------------------------------------

ಲಕ್ಷಣ:– ------------------------------------------------------

**VIII.** ಈ ಕೆಳಗಿನ ಪದ್ಯದ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. **1x4=4**

**30.** ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?

ಆಡಿನಮರಿ ಆನೆಯಾಗಬಲ್ಲದೆ?

ಸೀಳ(ಳು) ನಾಯಿ ಸಿಂಹದ ಮರಿಯಾಗಬಲ್ಲುದೆ?

ಅರಿವು ಆಚಾರ ಸಮ್ಯಜ್ಞಾನವನರಿಯದೆ

ನಾಮವ ಹೊತ್ತುಕೊಂಡು ತಿರುಗುವ ಗಾವಿಲರ

ಮುಖವ ನೋಡಲಾಗದು ಅಮುಗೇಶ್ವರಾ.

– ಅಮುಗೆರಾಯಮ್ಮ

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

**31.** ನಿಮ್ಮನ್ನು ವಿಜಯಪುರ ಜಿಲ್ಲೆಯ ಬಂಥನಾಳ ಗ್ರಾಮದ ಮೊರಾರ್ಜಿ ದೇಸಾಯಿ ವಸತಿಶಾಲೆಯ ವಿದ್ಯಾರ್ಥಿ ಸುಮನ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು ನಾಲ್ಕು ದಿನ ರಜೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. **1x5=5**

ಇವರಿಂದ,

ಇವರಿಗೆ,

ಮಾನ್ಯರೇ,

ವಿಷಯ:

ಈ ಮೂಲಕ

ದಿನಾಂಕ:

ಸ್ಥಳ: